ತುಂಬಾ ಚಪ್ಪಾಳೆ ಬಿತ್ತು. ಪ್ರೇಕ್ಷರ ಸಾಲಿನಲ್ಲಿ ಇದ್ದ ಒಬ್ಬರು ಕೇಳಿದರು, 'ಚೆನ್ನಾಗಿ ನೃತ್ಯ ಮಾಡಿದ್ದಿ. ಯಾರು ನಿನ್ನ ಗುರುಗಳು?' ಅವರ ಪ್ರಶ್ನೆ ಕೇಳಿ ನನಗೆ ಭಾರೀ ಅಚ್ಚರಿಯಾಗಿತ್ತು. ಅವರು ಒಂದಿಷ್ಟು ವಿವರಿಸಿದ ಬಳಿಕ, ನಾನು ಯಾರಿಂದ ನೃತ್ಯ ಕಲಿತೆನೋ ಅವರೇ



ನನ್ನ ಗುರು ಎಂಬುದಷ್ಟು ನನಗೆ ಅರ್ಥವಾಯಿತು. ಹಾಗಿದ್ದರೆ ನಾನು ವೈಜಯಂತಿಮಾಲಾ ಅವರನ್ನು ನೋಡಿ ಟಾಕೀಸ್‌ನಲ್ಲಿ ನೃತ್ಯ ಕಲಿತಿದ್ದಲ್ಲವೇ. ಅವರ ಗುರುಗಳನ್ನೇ ನನ್ನ ಗುರುಗಳಾಗಿಸಿಕೊಳ್ಳಬೇಕು ಎಂದು ಭಾವಿಸಿದೆ. ಹಾಗೆಂದು ಅವರೇ ಬಂದು ಹೆಚ್ಚಿನದೇನೂ ಹೇಳಿಕೊಡುವುದಿಲ್ಲ ಅಲ್ಲವೇ. ಮತ್ತೆ ಹೊಸ ಸಿನಿಮಾ ಯಾವಾಗ ಬರುವುದೋ, ಅಲ್ಲಿ ಯಾವಾಗ ಹೊಸ ನೃತ್ಯ ಪ್ರದರ್ಶನವಾಗುವುದೋ ಅದಕ್ಕಾಗಿ ಕಾಯಬೇಕಿತ್ತು. ನಾನೇ ಅವರ ಗುರುಗಳನ್ನು ಭೇಟಿಯಾಗಿ ನೃತ್ಯ ಕಲಿತರೆ ಹೇಗೆ ಎಂಬ ಯೋಚನೆಯೊಂದು ಹಾದು ಹೋಯಿತು. ಅದೆಲ್ಲ ಸಾಧ್ಯವೇ ಎಂದೂ ಅನಿಸಿತು. ಹೀಗೆ ಒಂದೆರಡು ವಾರಗಳಲ್ಲಿ ಒಮ್ಮೆ ನಾನು 'ಆನಂದ ವಿಕಟನ್' ಪತ್ರಿಕೆಯನ್ನು ಓದುತ್ತಿರುವಾಗ ವೈಜಯಂತಿ ಮಾಲಾ ಅವರ ಗುರುಗಳು ಕೆ.ಪಿ. ಕಿಟ್ಟಪ್ಪ ಪಿಳ್ಳೈ ಎಂದು ಗೊತ್ತಾಯಿತು. ಅವರನ್ನೇ ಕಂಡು ಮಾತನಾಡಿಸಬೇಕು ಎಂದು ನಾನು ಮತ್ತು ಶಕ್ತಿ ಮಾತಾಡಿಕೊಂಡೆವು. ನಾನು ಕನಸುಗಳನ್ನು ಸುಮ್ಮನೇ ಆಕಾಶಕ್ಕೆ ಚಿಮ್ಮಿಬಿಡುತ್ತಿದ್ದೆ... ನನ್ನ ಹೃದಯದಲ್ಲಿ ಭರವಸೆ ತುಂಬಿತ್ತು. ಅದು ಹೇಗೇ ಎಂದು ನನಗೆ ಗೊತ್ತಿಲ್ಲ.

ಕಿಟ್ಟಪ್ಪ ಪಿಳ್ಳೈ ಗುರುಗಳು ಎಲ್ಲಿದ್ದಾರೆ, ಅವರಿರುವ ಜಾಗಕ್ಕೆ ಹೇಗೆ ಹೋಗಬೇಕು ಎಂಬೆಲ್ಲ ಯೋಚನೆಗಳು ತಲೆಗೆ ಬರಲೇ ಇಲ್ಲ. ಅವರು ತಂಜಾವೂರಿನಲ್ಲಿದ್ದಾರೆ ಎಂದು ಅವರಿವರಿಂದ ಕೇಳಿ ತಿಳಿದು ನಾನು ಮತ್ತು ಶಕ್ತಿ ಅಲ್ಲಿಗೆ ಹೊರಟೇ ಬಿಟ್ಟೆವು. ಹೇಗೂ ಮನೆಯಲ್ಲಿ ನಮ್ಮನ್ನು ಕಂಡರೆ ಯಾರೊಬ್ಬರಿಗೂ ಇಷ್ಟವಿರಲಿಲ್ಲ. ಒಮ್ಮೆ ಮನೆಯಿಂದ ತೊಲಗಿದರೆ ಸಾಕು ಎಂದು ಮನೆಯ ಹಿರಿಯರಿಂದ ಬೈಸಿಕೊಳ್ಳುತ್ತಿದ್ದೆವು. 'ನನಗೆ ಶಕ್ತಿ, ಅವಳಿಗೆ ನಾನು' ಎಂದು ಸಾಧ್ಯವಾದಷ್ಟು ಮಟ್ಟಿಗೆ ಮನೆಯಿಂದ ಹೊರಗೆಯೇ ಬಾಳುತ್ತಿದ್ದೆವು. ನೃತ್ಯದ ಹುಚ್ಚೊಂದೇ ನಮ್ಮನ್ನು ಪೊರೆಯುತ್ತಿತ್ತು. ಆದ್ದರಿಂದ 'ಗುರುಗಳನ್ನು ಹುಡುಕಿಕೊಂಡು ಮನೆಬಿಟ್ಟು ಹೊರಟ ಪ್ರಕರಣ' ಎಂದು ನಾನಿದನ್ನು ಹೇಳುವಂತಿಲ್ಲ. ಯಾಕೆಂದರೆ ಮನೆಯಿಂದ ಯಾವತ್ತೋ ನಮ್ಮನ್ನು ತಳ್ಳಿಬಿಟ್ಟಾಗಿತ್ತು. ನಾನು ಮತ್ತು ಶಕ್ತಿ ಅಕ್ಷರಶಃ ಬೀದಿ ನಾಯಿಗಳಂತೆ ಬಾಳುತ್ತಿದ್ದೆವು. ಶಕ್ತಿಯ ಕುಟುಂಬದವರು ಹೆಚ್ಚು ಶಿಕ್ಷಿತರಲ್ಲ. ಅವರು ಅವಳನ್ನು ತಿರಸ್ಕರಿಸುವುದರಲ್ಲಿ ಅರ್ಥವಿತ್ತೇನೋ. ಆದರೆ ನನ್ನ ಕುಟುಂಬದವರು ಸುಶಿಕ್ಷಿತರು. ಅವರೆಲ್ಲರೂ ವ್ಯಗ್ರರಾಗಿದ್ದರು. ಅವೆಲ್ಲ ಕೆಟ್ಟ ನೆನಪುಗಳು, ಮರೆತುಬಿಡಬೇಕಷ್ಟೆ.

ಊರಿಂದ ಓಡಿ ಹೋದ ನಾವು ತಂಜಾವೂರಿನಲ್ಲಿ ಕಿಟ್ಟಪ್ಪ ಪಿಳ್ಳೈ ಅವರ ಮನೆಯನ್ನು ಹೇಗೋ